1

ಇಸ್ಲಾಮಿನಲ್ಲಿ ಆರಾಧನಾ ಪರಿಕಲ್ಪನೆ

مفهوم العبادة في الإسلام



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಮುಸ್ಲಿಮರೂ ಸೇರಿದಂತೆ ಜನರಲ್ಲಿ ಹೆಚ್ಚಿನವರೂ ಇಸ್ಲಾಮಿನ ಆರಾಧನಾ ಪರಿಕಲ್ಪನೆಯನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಅವರ ಪ್ರಕಾರ ಆರಾಧನೆ ಎಂದರೆ ಕೇವಲ ಪ್ರಾರ್ಥನೆ, ಉಪವಾಸ, ದಾನಧರ್ಮ ಇತ್ಯಾದಿಗಳು ಮಾತ್ರ. ಆದರೆ ನಿಜಸ್ಥಿತಿಯೇನೆಂದರೆ, ಆರಾಧನೆಯ ಬಗ್ಗೆಯಿರುವ ಈ ಸೀಮಿತ ತಿಳುವಳಿಕೆಯು ಆರಾಧನೆಯ ಒಂದು ಭಾಗವನ್ನು ಮಾತ್ರ ಸ್ಪರ್ಶಿಸುತ್ತದೆಯೇ ವಿನಾ ಅದನ್ನು ಸಮಗ್ರವಾಗಿ ಪ್ರತಿಬಿಂಬಿಸುವುದಿಲ್ಲ. ಏಕೆಂದರೆ ಇಸ್ಲಾಮಿನ ಪ್ರಕಾರ ಆರಾಧನೆ ಎನ್ನುವುದು ಮನುಷ್ಯರು ಮಾಡುವ ಸಕಲ ಕರ್ಮಗಳನ್ನೂ ಒಳಗೊಳ್ಳುತ್ತದೆ.

ಆರಾಧನೆ ಎನ್ನುವುದು ದೇವನು ಇಷ್ಟಪಡುವ ಬಾಹ್ಯ ಮತ್ತು ಆಂತರಿಕವಾದ ಎಲ್ಲಾ ಮಾತು ಮತ್ತು ಕರ್ಮಗಳನ್ನು ಒಳಗೊಳ್ಳುವ ಒಂದು ಸಮಗ್ರ ಪದವಾಗಿದೆ. ಸರಳವಾಗಿ ಹೇಳುವುದಾದರೆ, ಅಲ್ಲಾಹನ ಸಂತೃಪ್ತಿಯ-

ನ್ನು ಉದ್ದೇಶಿಸಿ ನಾವು ನುಡಿಯುವ ಮಾತು ಅಥವಾ ಮಾಡುವ ಕ್ರಿಯೆ ಎಲ್ಲವೂ ಆರಾಧನೆಗಳಾಗಿವೆ. ಇದು ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಚಟುವಟಿಕೆಗಳು ಮಾತ್ರವಲ್ಲದೆ ಜನಕಲ್ಯಾಣಕ್ಕಾಗಿರುವ ವೈಯುಕ್ತಿಕ ಕೊಡುಗೆಗಳನ್ನು ಸಹ ಒಳಗೊಳ್ಳುತ್ತದೆ.

ಇಸ್ಲಾಮ್ ಮನುಷ್ಯರನ್ನು ಸಮಗ್ರ ದೃಷ್ಟಿಕೋನದಿಂದ ನೋಡುತ್ತದೆ. ಇಸ್ಲಾಮಿನ ಪ್ರಕಾರ ಮನುಷ್ಯರು ತಮ್ಮನ್ನು ಸಂಪೂರ್ಣವಾಗಿ ದೇವನಿಗೆ ಸಮರ್ಪಿಸಿಕೊಳ್ಳಬೇಕು. ದೇವನಿಗೆ ಶರಣಾಗಿ ಜೀವಿಸಬೇಕು. ಕುರ್‌ಆನ್ ಹೇಳುತ್ತದೆ: “ಹೇಳಿರಿ, ನನ್ನ ನಮಾಝ್, ನನ್ನ ಬಲಿಕರ್ಮ, ನನ್ನ ಬದುಕು, ನನ್ನ ಮರಣ ಎಲ್ಲವೂ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮುಡಿಪಾಗಿದೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಇದನ್ನೇ ನನಗೆ ಆಜ್ಞಾಪಿಸಲಾಗಿದೆ. ನಾನು ಮುಸಲ್ಮಾನರಲ್ಲಿ ಮೊಟ್ಟಮೊದಲಿಗನಾಗಿದ್ದೇನೆ.” (ಕುರ್‌ಆನ್ 6:162–163)

ಈ ಶರಣಾಗತಿಯ ನೈಸರ್ಗಿಕ ಫಲಿತಾಂಶದ ಪ್ರಕಾರ ಮನುಷ್ಯನ ಕರ್ಮಗಳೆಲ್ಲವೂ ಅವನು ಯಾರಿಗೆ ತನ್ನ-ನ್ನು ಸಮರ್ಪಿಸಿಕೊಳ್ಳುತ್ತಾನೋ ಆ ದೇವನ ನಿರ್ದೇ-ಶನಗಳಿಗೆ ಬದ್ಧವಾಗಿರಬೇಕು. ಇಸ್ಲಾಮ್ ಎನ್ನುವುದು ಒಂದು ಜೀವನ ಮಾರ್ಗವಾಗಿರುವುದರಿಂದ, ಅದರ ಅನುಯಾಯಿಗಳು ಅದರ ಬೋಧನೆಗಳಿಗೆ ಅನುಗು-ಣವಾಗಿ ತಮ್ಮ ಬದುಕನ್ನು –ಅದು ಧಾರ್ಮಿಕವಾಗಿರ-ಲಿ, ರಾಜಕೀಯವಾಗಿರಲಿ ಅಥವಾ ಇತರ ಯಾವುದೇ ಆಗಿರಲಿ– ಮಾದರಿಯಾಗಿಸಬೇಕೆಂದು ಇಸ್ಲಾಮ್ ಆವ-ಶ್ಯಪಡುತ್ತದೆ. ಧರ್ಮ ಎಂದರೆ ಮನುಷ್ಯ ಮತ್ತು ದೇವನ ನಡುವಿನ ಖಾಸಗಿ ಸಂಬಂಧವಾಗಿದ್ದು ಧಾರ್ಮಿಕ ಕಟ್ಟು-ಪಾಡುಗಳಿಗೆ ಹೊರತಾಗಿರುವ ಅವನ ಚಟುವಟಿಕೆಗ-ಳಲ್ಲಿ ಅದಕ್ಕೆ ಯಾವುದೇ ಪ್ರಭಾವವಿಲ್ಲ ಎಂದು ಭಾವಿ-ಸುವವರಿಗೆ ಈ ಕಲ್ಪನೆ ವಿಚಿತ್ರವಾಗಿ ಕಾಣಬಹುದು. ಆದರೆ ವಾಸ್ತವವೇನೆಂದರೆ, ಯಾಂತ್ರಿಕವಾಗಿ ನಿರ್ವಹಿ-

ಸಲಾಗುವ ಮತ್ತು ಆಂತರಿಕವಾಗಿ ಯಾವುದೇ ಪ್ರಭಾವ ಬೀರದ ಧಾರ್ಮಿಕ ಕಟ್ಟುಪಾಡುಗಳಿಗೆ ಇಸ್ಲಾಮ್ ಹೆಚ್ಚಿನ ಮಹತ್ವ ನೀಡುವುದಿಲ್ಲ.

ಕಿಬ್ಲ (ನಮಾಝ್ ಮಾಡುವಾಗ ಮುಸ್ಲಿಮರು ಮುಖ ಮಾಡುವ ದಿಕ್ಕು) ಬದಲಾವಣೆಯ ಬಗ್ಗೆ ಮುಸ್ಲಿಮರನ್ನು ಮತ್ತು ಅವರೊಂದಿಗೆ ತರ್ಕಿಸುತ್ತಿದ್ದ ಯಹೂದಿ–ಕ್ರೈಸ್ತ-ರನ್ನು ಉದ್ದೇಶಿಸಿ ಕುರ್‌ಆನ್ ಹೇಳುತ್ತದೆ: “ನೀವು ನಿಮ್ಮ ಮುಖಗಳನ್ನು ಪೂರ್ವ ಅಥವಾ ಪಶ್ಚಿಮಕ್ಕೆ ತಿರುಗಿಸು-ವುದಲ್ಲ ಪುಣ್ಯ. ಬದಲಾಗಿ ಅಲ್ಲಾಹನಲ್ಲಿ, ಅಂತ್ಯದಿನದಲ್ಲಿ, ಮಲಕ್‌ಗಳಲ್ಲಿ (ದೇವದೂತರಲ್ಲಿ), ಗ್ರಂಥಗಳಲ್ಲಿ ಮತ್ತು ಪ್ರವಾದಿಗಳಲ್ಲಿ ವಿಶ್ವಾಸವಿಡುವವರು, ಹಣದ ಮೇಲೆ ಪ್ರೀತಿಯಿದ್ದೂ ಸಹ ಅದನ್ನು ಸಂಬಂಧಿಕರಿಗೆ, ಅನಾಥ-ರಿಗೆ, ಬಡವರಿಗೆ, ಪ್ರಯಾಣಿಕರಿಗೆ, ಬೇಡುವವರಿಗೆ ಮತ್ತು ಗುಲಾಮ ವಿಮೋಚನೆಗೆ ವ್ಯಯಿಸುವವರು, ನಮಾಝ್ ಸಂಸ್ಥಾಪಿಸುವವರು, ಝಕಾತ್ ನೀಡುವವರು, ಕರಾರು

ಮಾಡಿದರೆ ಅದನ್ನು ಪಾಲಿಸುವವರು, ತೀವ್ರ ಬಡತನದಲ್ಲೂ, ರೋಗಶಯ್ಯೆಯಲ್ಲೂ, ಯುದ್ಧದ ಸಂದರ್ಭದಲ್ಲೂ ತಾಳ್ಮೆಯಿಂದ ವರ್ತಿಸುವವರು ಯಾರೋ ಅವರೇ ನಿಜವಾದ ಪುಣ್ಯವಂತರು. ಅವರೇ ಸತ್ಯವಂತರು. ಅವರೇ ಭಯಭಕ್ತಿಯಿಂದ ಜೀವಿಸುವವರು." (ಕುರ್‌ಆನ್ 2:177)

ಮೇಲೆ ಹೇಳಿದ್ದೆಲ್ಲವೂ ಸತ್ಕರ್ಮಗಳಾಗಿವೆ. ಆದರೆ ಅವು ಆರಾಧನೆಯ ಒಂದು ಭಾಗ ಮಾತ್ರ. ಆರಾಧನೆಯ ಮೂಲ ಬುನಾದಿಯಾಗಿರುವ ವಿಶ್ವಾಸದ ಬಗ್ಗೆ ವಿವರಿಸುತ್ತಾ, ಅದಕ್ಕೆ ಅರುವತ್ತಕ್ಕಿಂತಲೂ ಹೆಚ್ಚು ಶಾಖೆಗಳಿವೆ, ಅದರ ಅತ್ಯುಚ್ಛ ಶಾಖೆಯು 'ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ﷺ) ಅವನ ಸಂದೇಶವಾಹಕರು' ಎಂಬ ಸಾಕ್ಷ್ಯವಚನವಾಗಿದ್ದರೆ ಅದರ ಅತಿ ಕೆಳಗಿನ ಶಾಖೆಯು ಜನರು ನಡೆದಾಡುವ ದಾರಿಗಳಲ್ಲಿರುವ ಅಡೆ–ತಡೆಗಳನ್ನು ನಿವಾರಿಸುವುದಾಗಿದೆ ಎಂದು

ಪ್ರವಾದಿ ಮುಹಮ್ಮದರು(ﷺ) ಕಲಿಸಿಕೊಟ್ಟಿದ್ದಾರೆ.

ಇಸ್ಲಾಮಿನ ಪ್ರಕಾರ ಗೌರವಾರ್ಹ ರೀತಿಯಲ್ಲಿ ಬದುಕುವು-ದು ಕೂಡ ಒಂದು ಆರಾಧನೆಯಾಗಿದೆ. ಪ್ರವಾದಿ ಮು-ಹಮ್ಮದರು(ﷺ) ಹೇಳುತ್ತಾರೆ: "ಸ್ವಂತ ದುಡಿಮೆಯಿಂದ ತಿನ್ನುವ ಆಹಾರಕ್ಕಿಂತ ಉತ್ತಮವಾದ ಆಹಾರ ಬೇರೊಂ-ದಿಲ್ಲ. ಪ್ರವಾದಿ ದಾವೂದ್(عليه السلام) ಸ್ವಂತ ದುಡಿಮೆಯಿಂದ ಬದುಕು ಸಾಗಿಸುತ್ತಿದ್ದರು."

ವಿದ್ಯೆ ಸಂಪಾದಿಸುವುದು ಇಸ್ಲಾಮಿನ ಪ್ರಕಾರ ಅತ್ಯುನ್ನತ ಮಟ್ಟದ ಆರಾಧನೆಯಾಗಿದೆ. ಪ್ರವಾದಿ ಮುಹಮ್ಮದರು (ﷺ) ಹೇಳುತ್ತಾರೆ: "ವಿದ್ಯೆ ಸಂಪಾದಿಸುವುದು ಪ್ರತಿಯೊಬ್ಬ ಮುಸಲ್ಮಾನನ ಧಾರ್ಮಿಕ ಕರ್ತವ್ಯವಾಗಿದೆ." ಇನ್ನೊಂದು ಕಡೆ ಅವರು ಹೇಳುತ್ತಾರೆ: "ವಿದ್ಯೆ ಸಂಪಾದಿಸುವುದಕ್ಕಾ-ಗಿ ಒಂದು ದಾರಿಯಲ್ಲಿ ಸಂಚರಿಸುವವನಿಗೆ ಅಲ್ಲಾಹು ಸ್ವರ್ಗದ ಕಡೆಗಿರುವ ದಾರಿಯನ್ನು ಸುಗಮಗೊಳಿಸದಿ-ರಲಾರ."

ಸಾಮಾಜಿಕ ಕಳಕಳಿ ಮತ್ತು ಸಹಕಾರ ಮನೋಭಾವವು ಅಲ್ಲಾಹನ ಸಂತೃಪ್ತಿಗಾಗಿ ಇರುವುದಾದರೆ ಅದು ಕೂಡ ಆರಾಧನೆಯಾಗಿದೆ. ಪ್ರವಾದಿ ಮುಹಮ್ಮದರು(ﷺ) ಹೇಳುತ್ತಾರೆ: "ಒಳಿತಿನ ಕಾರ್ಯಗಳೆಲ್ಲವೂ ದಾನವಾ-ಗಿದೆ (ಆರಾಧನೆಯಾಗಿದೆ). ನೀವು ನಿಮ್ಮ ಗೆಳೆಯನನ್ನು ನಗುಮುಖದಿಂದ ಸ್ವಾಗತಿಸುವುದು ಒಳಿತಿನ ಕಾರ್ಯ-ವಾಗಿದೆ. ನೀವು ನಿಮ್ಮ ನೆರೆಯವರ ಬಕೆಟ್ಟಿಗೆ ಸ್ವಲ್ಪ ನೀರು ಸುರಿಯುವುದು ಕೂಡ ಒಳಿತಿನ ಕಾರ್ಯವಾಗಿದೆ."

ಒಬ್ಬ ತನ್ನ ದೈನಂದಿನ ಕರ್ತವ್ಯವನ್ನು ನಿರ್ವಹಿಸುವುದು ಕೂಡ ಆರಾಧನೆಯಾಗಿ ಪರಿಗಣಿಸಲ್ಪಡುತ್ತದೆಯೆನ್ನು-ವುದು ಗಮನಾರ್ಹ. ಪ್ರವಾದಿ ಮುಹಮ್ಮದರು(ﷺ) ಹೇಳುತ್ತಾರೆ: "ಒಬ್ಬನು ತನ್ನ ಕುಟುಂಬಕ್ಕಾಗಿ ಖರ್ಚು ಮಾಡುವುದು ದಾನವಾಗಿದೆ. ಅವನು ಅದನ್ನು ಕಾ-ನೂನುಬದ್ಧವಾಗಿ ಸಂಪಾದಿಸಿದ್ದರೆ ಅವನಿಗೆ ಅದರಲ್ಲಿ ಪ್ರತಿಫಲವಿದೆ. ಕುಟುಂಬ ಸದಸ್ಯರಿಗೆ ಕನಿಕರ ತೋರಿ-

ಸುವುದು ಆರಾಧನೆಯಾಗಿದೆ. ಮಡದಿಯ ಬಾಯಿಗೆ ಒಂದು ತುತ್ತು ಅನ್ನ ಹಾಕುವುದು ಸಹ ದಾನವಾಗಿದೆ."

ಇಸ್ಲಾಮಿನಲ್ಲಿ ಆರಾಧನೆಯೆನ್ನುವುದು ಒಂದು ಸಮಗ್ರ ಪರಿಕಲ್ಪನೆಯಾಗಿದ್ದು ಅದು ಮನುಷ್ಯನ ಧನಾತ್ಮಕ ಕಾರ್ಯ–ಚಟುವಟಿಕೆಗಳೆಲ್ಲವನ್ನೂ ಒಳಗೊಳ್ಳುತ್ತದೆ-ಯೆಂದು ಇದರಿಂದ ತಿಳಿದುಕೊಳ್ಳಬಹುದು. ಜೀವನ ಮಾರ್ಗವೆಂಬ ನೆಲೆಯಲ್ಲಿರುವ ಇಸ್ಲಾಮಿನ ಸರ್ವಾಂ-ತರ್ಗತ ಪ್ರಕೃತಿಗೆ ಇದು ಸಂಪೂರ್ಣವಾಗಿ ಹೊಂದಿ-ಕೊಳ್ಳುತ್ತದೆ.

ಇಸ್ಲಾಮ್ ಮನುಷ್ಯನ ಜೀವನವನ್ನು ವೈಯುಕ್ತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಧ್ಯಾತ್ಮಿಕ-ವಾದ ಎಲ್ಲ ಕ್ಷೇತ್ರಗಳಲ್ಲೂ ನಿಯಂತ್ರಿಸುತ್ತದೆ. ಈ ಎಲ್ಲ ಕ್ಷೇತ್ರಗಳಲ್ಲೂ ಅತಿಚಿಕ್ಕ ವಿಷಯಗಳಲ್ಲೂ ಸಹ ಇಸ್ಲಾಮ್ ಮನುಷ್ಯನಿಗೆ ಮಾರ್ಗದರ್ಶನ ನೀಡುತ್ತದೆ. ತಾನು ಮಾಡುವ ಎಲ್ಲ ಕರ್ಮಗಳೂ ಆರಾಧನೆಗಳಾಗಿವೆ ಎಂಬ

ಅರಿವು ಮನುಷ್ಯನಿಗೆ ಉಂಟಾಗುವಾಗ ಅದು ಅವನಿಗೆ ವಿಶೇಷ ಪ್ರಚೋದನೆ ನೀಡುತ್ತದೆ. ಅವನು ಎಲ್ಲ ಕರ್ಮಗ-ಳಲ್ಲೂ ಅಲ್ಲಾಹನ ಸಂತೃಪ್ತಿಯನ್ನು ಬಯಸುತ್ತಾನೆ. ತಾನು ಒಂಟಿಯಾಗಿರುವಾಗಲೂ, ಇಲ್ಲದಿರುವಾಗಲೂ, ತನ್ನನ್ನು ತನ್ನ ಮೇಲ್ವಿಚಾರಕರು ಗಮನಿಸುತ್ತಿದ್ದರೂ, ಇಲ್ಲದಿದ್ದರೂ ಅವನು ತನ್ನ ಕರ್ತವ್ಯವನ್ನು ತನಗೆ ಸಾಧ್ಯವಾಗುವ ಅತ್ಯು-ತ್ತಮ ವಿಧದಲ್ಲಿ ನಿರ್ವಹಿಸಲು ಪ್ರಯತ್ನಿಸುತ್ತಾನೆ. ಕಾರಣ, ತನ್ನನ್ನು ಎಲ್ಲ ಸಮಯಗಳಲ್ಲೂ ಗಮನಿಸುತ್ತಿರುವ, ಎಲ್ಲ-ವನ್ನೂ ಅರಿಯುವ ಒಬ್ಬ ದೇವನು (ಅಲ್ಲಾಹು) ತನ್ನ ಮೇಲಿದ್ದಾನೆ ಎನ್ನುವ ಪ್ರಜ್ಞೆ ಅವನಲ್ಲಿರುತ್ತದೆ.

ನಾವು ಈ ತನಕ ಚರ್ಚಿಸಿದ್ದು ಇಸ್ಲಾಮಿನ ಅನುಷ್ಠಾನ ಕರ್ಮಗಳಲ್ಲದ ಇತರ ಆರಾಧನೆಗಳ ಬಗ್ಗೆಯಾಗಿದೆ. ಆದರೆ ಅನುಷ್ಠಾನ ಕರ್ಮಗಳಾದ ಆರಾಧನೆಗಳಿಗೆ ಇಸ್ಲಾ-ಮಿನಲ್ಲಿ ಇದಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯತೆಯಿದೆ. ಇಸ್ಲಾ-ಮಿನ ಪ್ರಕಾರ ಅನುಷ್ಠಾನ ಆರಾಧನೆಗಳನ್ನು ನಿಜವಾದ

ಸ್ಫೂರ್ತಿಯಿಂದ ನಿರ್ವಹಿಸುವಾಗ ಅದು ಮನುಷ್ಯನನ್ನು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಉನ್ನತಿಗೇರಿಸುವುದು ಮಾತ್ರವಲ್ಲದೆ, ಅವನ ಜೀವನದ ಎಲ್ಲ ಕಾರ್ಯ–ಚಟುವಟಿಕೆಗಳನ್ನು ಅಲ್ಲಾಹನ ಮಾರ್ಗದರ್ಶನದ ಪ್ರಕಾರ ನಿರ್ವಹಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ.

ಅನುಷ್ಠಾನ ಆರಾಧನೆಗಳ ಪೈಕಿ ನಮಾಝ್ ಪ್ರಮುಖ ಸ್ಥಾನವನ್ನು ಅಲಂಕರಿಸುತ್ತದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಅದು ಸತ್ಯವಿಶ್ವಾಸಿಯನ್ನು ಸತ್ಯನಿಷೇಧಿಗಳಿಂದ ಬೇರ್ಪಡಿಸುವ ವಿಶಿಷ್ಟ ಚಿಹ್ನೆಯಾಗಿದೆ. ಎರಡನೆಯದಾಗಿ, ತನ್ನ ಸೃಷ್ಟಿಕರ್ತನೊಡನೆ ದಿನಂಪ್ರತಿ ಐದು ಸಲ ಮುಖಾಮುಖಿಯಾಗುವ ಅವಕಾಶವನ್ನು ಒದಗಿಸುವ ಮೂಲಕ ಅದು ಮನುಷ್ಯನನ್ನು ಸರ್ವ ರೀತಿಯ ನೀಚ ಕೃತ್ಯಗಳಿಂದ ಮತ್ತು ದುರ್ಗುಣಗಳಿಂದ ತಡೆಯುತ್ತದೆ.

ಮನುಷ್ಯನು ದಿನಂಪ್ರತಿ ಐದು ಸಲ ಅಲ್ಲಾಹನೊಂದಿಗೆ

ಇರುವ ತನ್ನ ಕರಾರನ್ನು ನವೀಕರಿಸುವುದು ಮತ್ತು ಪುನಃ ಪುನಃ ಅವನಲ್ಲಿ ಮಾರ್ಗದರ್ಶನವನ್ನು ಬೇಡುವುದೇ ಇದಕ್ಕೆ ಕಾರಣ. ಮುಸ್ಲಿಮರು ತಮ್ಮ ಎಲ್ಲ ಪ್ರಾರ್ಥನೆಗಳಲ್ಲೂ, "ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಲ್ಲಿ ಮಾತ್ರ ಸಹಾಯ ಬೇಡುತ್ತೇವೆ. ನಮ್ಮನ್ನು ನೇರವಾದ ಮಾರ್ಗದಲ್ಲಿ ಮುನ್ನಡೆಸು." (ಕುರ್‌ಆನ್ 1:5-6) ಎಂದು ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಾರೆ.

ನಮಾಝ್ ವಿಶ್ವಾಸದ ಮೊಟ್ಟಮೊದಲ ಪ್ರಾಯೋಗಿಕ ಪ್ರಕಟಣೆಯಾಗಿದೆ. ಅದು ಯಶಸ್ಸಿನ ಮೂಲಭೂತ ಮೆಟ್ಟಿಲುಗಳಲ್ಲೇ ಅಗ್ರ ಸ್ಥಾನವನ್ನು ಹೊಂದಿದೆ. "ವಿಧ್ಯುಕ್ತವಾಗಿ ಮತ್ತು ಸಂಪೂರ್ಣ ಶರಣಾಗತಿಯಿಂದ ನಮಾಝ್ ನಿರ್ವಹಿಸುವ ಸತ್ಯವಿಶ್ವಾಸಿಗಳು ಯಶಸ್ಸು ಗಳಿಸಿದರು." (ಕುರ್‌ಆನ್ 23:1–2)

ಇದೇ ವಿಷಯವನ್ನು ಪ್ರವಾದಿ ಮುಹಮ್ಮದರು(ﷺ) ಒತ್ತುಕೊಟ್ಟು ಇನ್ನೊಂದು ರೀತಿಯಲ್ಲಿ ಹೀಗೆ ಹೇಳು-

ತ್ತಾರೆ: "ಪೂರ್ಣ ಕಾಳಜಿ ಮತ್ತು ಸಮಯನಿಷ್ಠೆಯಿಂದ ನಮಾಝ್ ನಿರ್ವಹಿಸುವವರು, ಅಂತ್ಯದಿನದಂದು ಅದನ್ನೊಂದು ಬೆಳಕಾಗಿ, ವಿಶ್ವಾಸದ ಪುರಾವೆಯಾಗಿ ಮತ್ತು ಮೋಕ್ಷಕ್ಕೆ ಕಾರಣವಾಗಿ ಕಾಣುವರು."

ನಮಾಝಿನ ನಂತರ ಝಕಾತ್ ಇಸ್ಲಾಮಿನ ಇನ್ನೊಂದು ಪ್ರಮುಖ ಸ್ಥಂಭವಾಗಿದೆ. ಕುರ್‌ಆನಿನಲ್ಲಿ ನಮಾಝ್ ಮತ್ತು ಝಕಾತನ್ನು ಒಟ್ಟೊಟ್ಟಿಗೆ ಉಲ್ಲೇಖಿಸಿರುವುದನ್ನು ಕಾಣಬಹುದು. ನಮಾಝಿನಂತೆಯೇ ಝಕಾತ್ ಕೂಡ ವಿಶ್ವಾಸದ ಪ್ರಕಟಣೆಯಾಗಿದ್ದು ಅದು ವಿಶ್ವದಲ್ಲಿರುವ ಎಲ್ಲ ವಸ್ತುಗಳ ನಿಜವಾದ ಏಕೈಕ ಒಡೆಯ ಅಲ್ಲಾಹು ಮಾತ್ರ ಎನ್ನುವುದನ್ನು ದೃಡೀಕರಿಸುತ್ತದೆ. ಮನುಷ್ಯರ ಕೈಯಲ್ಲಿರುವುದೆಲ್ಲವೂ ಅಲ್ಲಾಹು ಅವರಿಗೆ ವಿಶ್ವಾಸದಿಂದ ಒಪ್ಪಿಸಿದ ಉತ್ತರಾಧಿಕಾರ ಸೊತ್ತಾಗಿದ್ದು ಅದನ್ನು ಅವನ ನಿರ್ದೇಶನದಂತೆ ಅವರು ನಿರ್ವಹಿಸಬೇಕಾಗಿದೆ. "ಅಲ್ಲಾಹನಲ್ಲೂ ಅವನ ಸಂದೇಶವಾಹಕರಲ್ಲೂ ವಿಶ್ವಾಸವಿಡಿ

ಮತ್ತು ಅವನು ನಿಮಗೆ ಉತ್ತರಾಧಿಕಾರವಾಗಿ ಒದಗಿಸಿದ ಸಂಪತ್ತಿನಿಂದ ಖರ್ಚು ಮಾಡಿ." (ಕುರ್‌ಆನ್ 57:7)

ಝಕಾತ್ ಎನ್ನುವುದು ಒಂದು ಉಪಾಸನೆಯಾಗಿದ್ದು, ನಮಾಝಿನಂತೆ ಅದು ಕೂಡ ಮನುಷ್ಯನನ್ನು ಅಲ್ಲಾಹನಿಗೆ ಸಮೀಪಗೊಳಿಸುತ್ತದೆ. ಝಕಾತ್ ಕೆಳವರ್ಗ–ಮೇಲ್ವರ್ಗಗಳೆಂಬ ಬೇಧಭಾವವನ್ನು ತೊಲಗಿಸುವ ವಿಧದಲ್ಲಿ ಸಂಪತ್ತನ್ನು ಸಮಾಜದ ಮಧ್ಯೆ ಹಂಚುತ್ತದೆ. ಅದು ಸಾಮಾಜಿಕ ಸ್ಥಿರತೆಗೆ ಒತ್ತು ಕೊಡುತ್ತದೆ. ಸರ್ವ ರೀತಿಯ ಸ್ವಾರ್ಥಗಳಿಂದ ಸಿರಿವಂತರ ಆತ್ಮವನ್ನು ಮತ್ತು ಸಮಾಜದ ವಿರುದ್ಧವಿರುವ ಅಸಮಾಧಾನ ಮತ್ತು ಅತೃಪ್ತಿಗಳಿಂದ ಬಡವರ ಆತ್ಮಗಳನ್ನು ಶುದ್ಧೀಕರಿಸುವ ಮೂಲಕ ವರ್ಗೀಯ ದ್ವೇಷದ ಕಡೆಗೆ ಒಯ್ಯುವ ಮಾರ್ಗಗಳನ್ನು ತಡೆದು, ಸಮಾಜ ಸದಸ್ಯರ ನಡುವೆ ಪ್ರೀತಿ ಮತ್ತು ಭಾತೃತ್ವವು ಬೆಳೆಯುವಂತೆ ಮಾಡುತ್ತದೆ. ಝಕಾತ್ ಶ್ರೀಮಂತರ ಉದಾರತೆಯಲ್ಲ. ಬದಲಾಗಿ ಅದು ಬಡವರ

ಹಕ್ಕಾಗಿದೆ. ಶ್ರೀಮಂತರು ಈ ಹಕ್ಕನ್ನು ನೀಡಲು ನಿರಾಕರಿಸಿದರೆ ನ್ಯಾಯಾಲಯದ ಮೂಲಕ ಅದನ್ನು ಬಲವಂತವಾಗಿ ಪಡೆಯುವ ಅವಕಾಶ ಬಡವರಿಗಿದೆ.

ರಮದಾನ್ ತಿಂಗಳಲ್ಲಿ ಪ್ರಭಾತದಿಂದ ಸೂರ್ಯಾಸ್ತದ ತನಕ ಉಪವಾಸ ಆಚರಿಸುವುದು ಇಸ್ಲಾಮಿನ ಇನ್ನೊಂದು ಸ್ಥಂಭವಾಗಿದೆ. ಕಾನೂನು ಕಟ್ಟಳೆಗಳು ಮನುಷ್ಯನನ್ನು ಬಾಹ್ಯವಾಗಿ ಶುದ್ಧೀಕರಿಸಿದರೆ ಉಪವಾಸವು ಆಂತರಿಕವಾಗಿ ಶುದ್ಧೀಕರಿಸುತ್ತದೆ. ಈ ಶುದ್ಧಿಯ ಮೂಲಕ ಮನುಷ್ಯನು ಒಳಿತನ್ನು ಸ್ವೀಕರಿಸಿ ಕೆಡುಕಿನಿಂದ ದೂರವಾಗುತ್ತಾನೆ. ಕುರ್‌ಆನ್ ಹೇಳುತ್ತದೆ: “ಓ ಸತ್ಯವಿಶ್ವಾಸಿಗಳೇ, ನಿಮ್ಮ ಪೂರ್ವಜರ ಮೇಲೆ ಉಪವಾಸವನ್ನು ಕಡ್ಡಾಯಗೊಳಿಸಿದಂತೆ ನಿಮ್ಮ ಮೇಲೂ ಕಡ್ಡಾಯಗೊಳಿಸಲಾಗಿದೆ. ನೀವು ಭಯಭಕ್ತಿಯಿಂದ ಜೀವಿಸುವುದಕ್ಕಾಗಿ.” (ಕುರ್‌ಆನ್ 2:183)

ಉಪವಾಸ ಆಚರಿಸುವವನ ಬಗ್ಗೆ “ನನ್ನ ದಾಸ ನನಗಾಗಿ

ಆಹಾರ, ಪಾನೀಯ ಮತ್ತು ಲೈಂಗಿಕ ಆಸೆಯನ್ನು ಅದುಮಿಟ್ಟು ನನ್ನ ಆಜ್ಞೆಯನ್ನು ಪಾಲಿಸುತ್ತಿದ್ದಾನೆಂದು ಅಲ್ಲಾಹು ಪ್ರಶಂಸಿಸುತ್ತಾನೆ" ಎಂದು ಪ್ರವಾದಿ ಮುಹಮ್ಮದರು(ﷺ) ನುಡಿದಿದ್ದಾರೆ. ಉಪವಾಸ ಆಚರಿಸುವವರಿಗೆ ಸಿಗುವ ಪ್ರತಿಫಲವು ಅಲ್ಲಾಹನ ಮಹಾ ಔದಾರ್ಯಕ್ಕೆ ಅನುಗುಣವಾಗಿರುತ್ತದೆ.

ಉಪವಾಸವು ಮನುಷ್ಯನ ಆತ್ಮಸಾಕ್ಷಿಯನ್ನು ಎಚ್ಚರಗೊಳಿಸುತ್ತದೆ. ಅತಿಯಾಗಿ ದುಡಿದು ದಣಿದಿರುವ ಪಚನ ವ್ಯವಸ್ಥೆಗೆ ಅದು ಒಂದು ತಿಂಗಳ ಸುದೀರ್ಘ ವಿರಾಮವನ್ನು ನೀಡುತ್ತದೆ. ಜೀವನದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಸಮಾಜದ ಬಡ ಜನರ ಬಗ್ಗೆ ಮನುಷ್ಯನಿಗೆ ವರ್ಷ ಪೂರ್ತಿ ಅಥವಾ ಆಯುಷ್ಯ ಪೂರ್ತಿ ಜ್ಞಾಪಿಸುತ್ತದೆ. ಇತರರ ನೋವಿನಲ್ಲಿ ಭಾಗಿಯಾಗುವಂತೆ ಮಾಡುವ ಮೂಲಕ ಅವರ ಬಗ್ಗೆ ಕನಿಕರ ಮತ್ತು ಸಹಾನುಭೂತಿ ಉಂಟಾಗಲು ಕಾರಣವಾಗುತ್ತದೆ.

ಹಜ್ಜ್ ಇಸ್ಲಾಮಿನ ಇನ್ನೊಂದು ಪ್ರಮುಖ ಸ್ಥಂಭವಾಗಿದೆ. ಅದು ಯಾವುದೇ ವಿಧದ ಬೇಧಭಾವವಿಲ್ಲದ ಅಪ್ರತಿಮ ಐಕ್ಯತೆಯನ್ನು ಪ್ರಕಟಿಸುತ್ತದೆ. ಒಂದೇ ರೀತಿಯ ಬಟ್ಟೆ ತೊಟ್ಟು, ಒಂದೇ ಸ್ವರದಲ್ಲಿ, ಒಂದೇ ಭಾಷೆಯಲ್ಲಿ ಜಗತ್ತಿನ ನಾನಾ ಮೂಲೆಗಳಿಂದ ಬಂದ ಮುಸಲ್ಮಾನರು 'ಲೆಬ್ಬೈಕಲ್ಲಾಹುಮ್ಮ ಲೆಬ್ಬೈಕ್' (ಓ ಅಲ್ಲಾಹ್, ನಿನ್ನ ಕರೆಗೆ ಓಗೊಟ್ಟು ನಾನಿದೋ ಇಲ್ಲಿ ಹಾಜರಿದ್ದೇನೆ) ಎಂದು ಹೇಳುತ್ತಾರೆ. ಹಜ್ಜ್ ಕಟ್ಟುನಿಟ್ಟಾದ ಶಿಸ್ತು ಮತ್ತು ಆತ್ಮನಿಗ್ರಹದ ತರಬೇತಿಯನ್ನು ನೀಡುತ್ತದೆ. ಅದು ಕೆಲವು ಪವಿತ್ರ ವಸ್ತುಗಳಿಗೆ ಅನಾದರ ತೋರುವುದನ್ನು ಮಾತ್ರವಲ್ಲದೆ, ಗಿಡಗಳನ್ನು ಕೀಳುವುದು ಮತ್ತು ಹಕ್ಕಿಗಳನ್ನು ಕೊಲ್ಲುವುದು ಮುಂತಾದ ಕಾರ್ಯಗಳನ್ನು ಸಹ ನಿಷೇಧಿಸುವ ಮೂಲಕ ಎಲ್ಲರೂ ನಿರ್ಭಯರಾಗಿ ಜೀವಿಸಲು ಅನುವು ಮಾಡಿಕೊಡುತ್ತದೆ. "ಅಲ್ಲಾಹನ ಪವಿತ್ರ ಲಾಂಛನಗಳನ್ನು ಗೌರವಿಸುವವರು ಯಾರೋ, ಅವರಿಗೆ ಅವರ ಒಡೆಯನ

ಬಳಿ ಅದು ಅತ್ಯುತ್ತಮವಾಗಿದೆ." (ಕುರ್‌ಆನ್ 22:30)

ಜಗತ್ತಿನಾದ್ಯಂತವಿರುವ ಎಲ್ಲ ಗುಂಪು, ವರ್ಗ, ಸಂಸ್ಥೆ ಮತ್ತು ಸರಕಾರಗಳ ಜನರು ಒಂದು ವಾರ್ಷಿಕ ಮಹಾ ಸಮ್ಮೇಳನದಲ್ಲಿ ಒಟ್ಟುಗೂಡುವ ಅವಕಾಶವನ್ನು ಹಜ್ಜ್ ಒದಗಿಸುತ್ತದೆ. ಈ ಸಮ್ಮೇಳನದ ಸಮಯ ಮತ್ತು ಸ್ಥಳ ಸ್ವಯಂ ದೇವನಿಂದಲೇ ನಿಗದಿಯಾಗಿದೆ. ಈ ಸಮ್ಮೇಳನಕ್ಕೆ ಹಾಜರಾಗಲು ಎಲ್ಲ ಮುಸ್ಲಿಮರಿಗೂ ತೆರೆದ ಆಮಂತ್ರಣವಿದೆ. ಯಾರನ್ನೂ ತಡೆಯುವ ಅಧಿಕಾರ ಯಾರಿಗೂ ಇಲ್ಲ. ಈ ಸಮ್ಮೇಳನಕ್ಕೆ ಹಾಜರಾಗುವ ಪ್ರತಿಯೊಬ್ಬ ಮುಸಲ್ಮಾನನಿಗೂ, ಅವನು ಅದರ ಪಾವಿತ್ರ್ಯವನ್ನು ಉಲ್ಲಂಘಿಸದಿರುವ ತನಕ ಸುರಕ್ಷತೆ ಮತ್ತು ಸ್ವಾತಂತ್ರ್ಯದ ಖಾತ್ರಿಯನ್ನು ನೀಡಲಾಗುತ್ತದೆ.

ಒಟ್ಟಿನಲ್ಲಿ, ಇಸ್ಲಾಮಿನಲ್ಲಿ ಆರಾಧನೆಯು —ಅದು ಅನುಷ್ಠಾನ ಕರ್ಮವಾಗಿರಲಿ ಅಲ್ಲದಿರಲಿ— ಪ್ರತಿಯೊಬ್ಬ ವ್ಯಕ್ತಿಯನ್ನು ಯಾವ ರೀತಿ ತರಬೇತಿಗೊಳಿಸುತ್ತದೆಯೆಂ-

ದರೆ ಅದರ ಮೂಲಕ ಅವನು ತನ್ನ ಸೃಷ್ಟಿಕರ್ತನನ್ನು ಅತಿಯಾಗಿ ಪ್ರೀತಿಸುವುದು ಮಾತ್ರವಲ್ಲದೆ, ಮಾನವ ಸಮಾಜದಿಂದ ಎಲ್ಲ ರೀತಿಯ ಕೆಡುಕು ಮತ್ತು ದಬ್ಬಾಳಿಕೆಯನ್ನು ಅಳಿಸಿ ಹಾಕುವ ಅಪ್ರತಿಮ ಇಚ್ಛೆ ಮತ್ತು ಸ್ಫೂರ್ತಿಯನ್ನು ಪಡೆಯುತ್ತಾನೆ. ಮಾತ್ರವಲ್ಲ, ಅಲ್ಲಾಹನ ವಚನವು ಭೂಮಿಯಲ್ಲಿ ಪ್ರಾಬಲ್ಯ ಮೆರೆಯುವಂತೆಯೂ ಮಾಡುತ್ತಾನೆ.

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore